ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 23.06.2026.

**ಪಾಟೀ ಸವಾಲು – 1 ರಿಂದ 3 ನೇ ಪ್ರತಿವಾದಿ ಪರಃ ವಕೀಲರಿಂದಃ**

1978 ರಲ್ಲಿ ನಾವು ಅಣ್ಣತಮ್ಮಂದಿರು ಬೇರೆ ಆಗಿರುತ್ತೇವೆ. ಎಲ್ಲರಿಗೂ ತಲಾ 30 ಗುಂಟೆ ಬಂದಿರುತ್ತದೆ. 2012 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗದ ಪ್ರಕಾರ ಮಲ್ಲಿಕಾರ್ಜುನಪ್ಪ ನಿಂಗಪ್ಪ ಒಡೆಯನಪುರ ರವರಿಗೆ 31 ಗುಂಟೆ, ನನಗೆ 31 ಗುಂಟೆ, ದ್ಯಾಮಜಪ್ಪ ನಿಂಗಪ್ಪ ಒಡೆಯನಪುರ ರವರಿಗೆ 31 ಗುಂಟೆ, ಕೆಂಚಪ್ಪ ನಿಂಗಪ್ಪ ಒಡೆಯನಪುರ ರವರಿಗೆ 33 ಗುಂಟೆ ಹಾಗೂ ಪ್ರತಿವಾದಿ 1 ರವರಿಗೆ 33 ಗುಂಟೆ ಬಂದಿರುತ್ತದೆ. ವೀರಪ್ಪ ಒಡೆಯನಪುರ ರವರಿಗೆ 31 ಗುಂಟೆ ಬಂದಿರುತ್ತದೆ. ಸದರಿ ಹಿಸ್ಸೆಯಂತೆ ಎಲ್ಲರೂ ವಹಿವಾಟು ಮಾಡುತ್ತೀರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1 ನೇ ಪ್ರತಿವಾದಿ ಸಂಚಗಾರ ಪತ್ರ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದಿರಾ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಗೆ ತನ್ನ ಹಿಸ್ಸೆ ಪ್ರಕಾರ ಆಸ್ತಿ ಬಂದಿರುವುದರಿಂದ ಅವನಿಗೆ ಮತ್ತು ಅವನ ಕುಟುಂಬಕ್ಕೆ ಮಾತ್ರ ಸಂಬಂಧಿಸಿದ್ದು ನಿಮಗೆ ಯಾವುದು ಹಿಸ್ಸೆ ಇರುವುದಿಲ್ಲಾ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಖರೀದಿ ಕೊಟ್ಟಿರುತ್ತಾನೆ ಎನ್ನುತ್ತಾರೆ. 02.04.1993 ರಂದು ಖರೀದಿ ತೆಗೆದುಕೊಂಡಿರುತ್ತೇನೆ. ನೀವು ಸಲ್ಲಿಸಿದ ದಾವೆ ವಜಾ ಆಗಿರುವ ಕಾರಣ 1 ನೇ ಪ್ರತಿವಾದಿಯ ಹಿಸ್ಸೆಯಲ್ಲಿ ಯಾವುದೇ ಹಕ್ಕು ಇಲ್ಲಾ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.